# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 523 |
| 2. ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು |
| 3. ಉತ್ತರಿಸಬೇಕಾದ ದಿನಾಂಕ | : | 12-12-2024 |
| 4. ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ. ಸಂ | ವಿಷಯ | ಉತ್ತರ |
|---|---|---|
| ಅ) | ಬೆಂಗಳೂರಿನಲ್ಲಿ ಪ್ರತಿನಿತ್ಯ ಎಷ್ಟು ಜನರು ಮೆಟ್ರೋ ರೈಲಿನಲ್ಲಿ ಸಂಚಾರ ಮಾಡುತ್ತಾರೆ. ಹಾಗೂ ಎಷ್ಟು ನಿಲ್ದಾಣಗಳನ್ನು ಹೊಂದಿದೆ. ಕಳೆದ 3 ವರ್ಷದ ಅವಧಿಯಲ್ಲಿ ಗಳಿಸಿರುವ ಲಾಭವೆಷ್ಟು; | ಬೆಂಗಳೂರು ಮೆಟ್ರೋ ರೈಲಿನಲ್ಲಿ ಪ್ರತೀ ನಿತ್ಯ ಸರಾಸರಿ 7.45 ಲಕ್ಷ ಪ್ರಯಾಣಿಕರು ಸಂಚರಿಸುತ್ತಾರೆ.<br><br>ಪ್ರಸ್ತುತ 68 ಮೆಟ್ರೋ ನಿಲ್ದಾಣಗಳನ್ನು ಹೊಂದಿರುತ್ತದೆ.<br><br>ಕಳೆದ 3 ವರ್ಷದ ಅವಧಿಯಲ್ಲಿ ಗಳಿಸಿರುವ ಲಾಭ ನಷ್ಟಗಳ ವಿವರಗಳು ಕೆಳಕಂಡಂತಿದೆ: |

**(ರೂ. ಲಕ್ಷಗಳಲ್ಲಿ)**

| ವರ್ಷವಾರು | ಆದಾಯ | ಖರ್ಚು | ಆದಾಯ ತೆರಿಗೆ | ಲಾಭ/ ನಷ್ಟ |
|---|---|---|---|---|
| 2023-24 | 99001.58 | 121246.47 | 11912.41 | -34157.30 |
| 2022-23 | 59401.20 | 99573.41 | 6540.17 | -46712.38 |
| 2021-22 | 20729.37 | 82194.51 | -3773.53 | -47691.61 |

| ಕ್ರ. ಸಂ | ವಿಷಯ | ಉತ್ತರ |
|---|---|---|
| ಆ) | ಪ್ರತಿ ಮೆಟ್ರೋ ಸ್ಟೇಷನ್ ನಿಗಮದಿಂದ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ ಹಾಗೂ ಎಷ್ಟು ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಇದರಲ್ಲಿ ಖಾಯಂ ಮತ್ತು ಗುತ್ತಿಗೆ ನೌಕರರ ಸಂಖ್ಯೆಯೆಷ್ಟು; | ಬೆಂಗಳೂರು ಮೆಟ್ರೋ ರೈಲು ನಿಲ್ದಾಣಗಳಲ್ಲಿ ಕೆಳಕಂಡಂತೆ ಸೌಲಭ್ಯಗಳನ್ನು ಒದಗಿಸಲಾಗಿದೆ.<br><br>1. ವಿಶ್ರಾಂತಿ ಕೊಠಡಿ.<br>2. ಎಸ್ಕಲೇಟರ್ಸ್.<br>3. ಲಿಫ್ಟ್ಸ್<br>4. ವ್ಹೀಲ್ ಚೇರ್.<br>5. ವ್ಹೀಲ್ ಚೇರ್ ಸಂಚರಿಸಲು ಇಳಿಜಾರು ವ್ಯವಸ್ಥೆ.<br>6. ಕುಡಿಯುವ ನೀರಿನ ವ್ಯವಸ್ಥೆ.<br>7. ಪ್ಲಾಟ್‌ಫಾರಂಗಳಲ್ಲಿ ಕುಳಿತುಕೊಳ್ಳಲು ಮೂರು ಆಸನಗಳ ಕುರ್ಚಿಗಳ ವ್ಯವಸ್ಥೆ.<br>8. ತುರ್ತುಚಿಕಿತ್ಸೆಗಾಗಿ ಪ್ರಥಮ ಚಿಕಿತ್ಸೆ ಪೆಟ್ಟಿಗೆ.<br>9. ಸುರಂಗಮಾರ್ಗದ ನಿಲ್ದಾಣಗಳಲ್ಲಿ ಹವಾನಿಯಂತ್ರಣ ಸೌಲಭ್ಯ.<br>10. ಮಾರ್ಗ ನಕ್ಷೆ ಸೇರಿದಂತೆ ಸಾರ್ವಜನಿಕ ಮಾಹಿತಿ ವ್ಯವಸ್ಥೆ.<br>11. ಟಿಕೆಟ್ ಸ್ಥಳ, QR ಕೋಡ್ ಪಾವತಿ ವ್ಯವಸ್ಥೆಗಳು.<br>12. ಭದ್ರತೆ/ಸ್ಕ್ರೀನಿಂಗ್ ಸೌಲಭ್ಯಗಳು.<br>13. ಸಾಕಷ್ಟು ಬೆಳಕು, ರೈಲು ಆಗಮನ/ನಿರ್ಗಮನದ ಫಲಕಗಳು. |

<table>
<tr>
<td></td>
<td></td>
<td>ಮೆಟ್ರೋ ಸ್ಟೇಷನ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಮತ್ತು ಗುತ್ತಿಗೆ ನೌಕರರ ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ಟಿಕೇಟ್ ಟಿಕೇಟ್ ಅಪರೇಟಿಂಗ್ ಸಿಬ್ಬಂದಿ</th><th>ಭದ್ರಾತ ಸಿಬ್ಬಂದಿ</th><th>ಖಾಯಂ ಸಿಬ್ಬಂದಿಗಳು</th></tr>
<tr><td>10 ಹೊರ ಗುತ್ತಿಗೆ ನೌಕರರು ಮೂರು ಶಿಫ್ಟ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.</td><td>ಮೂರು ಶಿಫ್ಟ್ ಗಳಲ್ಲಿ ಸರಾಸರಿ 36 ಸಿಬ್ಬಂದಿಗಳು ಹೊರಗುತ್ತಿಗೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.</td><td>ಬಿ.ಎಂ.ಆರ್.ಸಿ.ಎಲ್ ನ 15 ಖಾಯಂ ಸಿಬ್ಬಂದಿಗಳು ಮೂರು ಶಿಫ್ಟ್‌ನಲ್ಲಿ ಪ್ರತಿ ಶಿಫ್ಟ್‌ನಲ್ಲಿ 5 ರಂತೆ ಖಾಯಂ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.</td></tr>
</table>
</td>
</tr>
<tr>
<td>ಇ)</td>
<td>ಕೆಂಪೇಗೌಡ ಮೆಟ್ರೋ ಸ್ಟೇಷನ್ ಒಳಗೊಂಡಂತೆ ಎಲ್ಲಾ ನಿಲ್ದಾಣಗಳಲ್ಲಿರುವ ಶೌಚಾಲಯ ಮಹಿಳೆಯರು ಮಕ್ಕಳಿಗೆ ಹಾಲುಣಿಸಲು (ಆರೈಕೆ) ಎಷ್ಟು ಕೇಂದ್ರಗಳನ್ನು ನಿರ್ಮಿಸಲಾಗಿದೆ;</td>
<td rowspan="2">ಎಲ್ಲಾ ಮೆಟ್ರೋ ನಿಲ್ದಾಣಗಳಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ ಹಾಗೂ ಅಂಗವಿಕಲರಿಗೆ ಶೌಚಾಲಯಗಳಲ್ಲಿ ಸೂಕ್ತ ವ್ಯವಸ್ಥೆ ಮಾಡಲಾಗಿದೆ.<br><br>ಈ ಕೆಳಕಂಡ 4 ಮೆಟ್ರೋ ನಿಲ್ದಾಣಗಳಲ್ಲಿ ಶಿಶು ಆಹಾರ ಕೇಂದ್ರವನ್ನು ಹೊಂದಿವೆ. ಅವುಗಳು ಈ ಕೆಳಕಂಡಂತಿದೆ:<br><br>1) ನಾಡಪ್ರಭು ಕೆಂಪೇಗೌಡ ಮೆಟ್ರೋ ನಿಲ್ದಾಣ, ಮೆಜೆಸ್ಟಿಕ್<br>2) ಯಶವಂತಪುರ ಮೆಟ್ರೋ ನಿಲ್ದಾಣ<br>3) ಚಿಕ್ಕಪೇಟೆ ಮೆಟ್ರೋ ನಿಲ್ದಾಣ<br>4) ನಾಗಸಂದ್ರ ಮೆಟ್ರೋ ನಿಲ್ದಾಣ</td>
</tr>
<tr>
<td>ಈ)</td>
<td>ಪ್ರತಿ ನಿಲ್ದಾಣದಲ್ಲಿ ಕೇವಲ ಒಂದೇ ಒಂದು ಶೌಚಾಲಯ ಇರುವುದು ಹಾಗೂ ಮಹಿಳೆಯರು ಮಕ್ಕಳಿಗೆ ಹಾಲುಣಿಸುವ ಆರೈಕೆ ಕೇಂದ್ರಗಳನ್ನು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಹಾಗೂ ಇಷ್ಟು ವರ್ಷವಾದರೂ ಇದುವರೆಗೂ ಕ್ರಮ ಕೈಗೊಳ್ಳದಿರಲು ಸರ್ಕಾರಕ್ಕೆ ಇರುವ ತೊಂದರೆಯಾದರೂ ಏನು?</td>
</tr>
</table>

ಕಡತ ಸಂಖ್ಯೆ: ನಅಇ 185 ಪಿ.ಆರ್.ಜೆ 2024

(ಡಿ. ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ